ಶ್ರೀ ಪಂಪಾಪತಿ (ಮಾನ್ಯ ಆರ್. ವೆಂಕಟರಾವಯ್ಯನವರ ಪರವಾಗಿ).—ಮಾನ್ಯ ಅಧ್ಯಕ್ಷರೆ, ಉದ್ಯೋಗ ವಿನಿಮಯ ಕೇಂದ್ರದಲ್ಲಿ ಒಟ್ಟು ಎಷ್ಟು ಜನ ಅಭ್ಯರ್ಥಿಗಳು ತಮ್ಮ ಹೆಸರುಗಳನ್ನು ನೋಂದಣಿ ಮಾಡಿಸಿದ್ದಾರೆ ಎನ್ನುವ ಬಗ್ಗೆ ವಿವರ ಏನಾದರೂ ಇದೆಯೆ ?

ಶ್ರೀ ಎಸ್. ಕೆ. ಕಾಂತಾ.—ಮಾನ್ಯ ಅಧ್ಯಕ್ಷರೇ ನಾನು ಈಗಾಗಲೇ ಮೊದಲನೆಯ ಪ್ರಶ್ನೆಗೆ ಉತ್ತರ ಹೇಳಿದ್ದೇನೆ. ಒಟ್ಟು ನೋಂದಾಯಿಸಿರತಕ್ಕಂಥವರು ೧೯೮೫ಕ್ಕೆ ೨,೦೯,೪೬೩, ೧೯೮೬ಕ್ಕೆ ೧,೮೫,೧೮೬, ೧೯೮೭ನೇ ಇಸವಿಗೆ ೨,೨೧,೨೨೭ ಜನರೆಂದು ಹೇಳಿದ್ದೇನೆ.

ವಿವಿಧ ಯೋಜನೆಗಳಡಿಯಲ್ಲಿ ವೃತ್ತಿಪರ ತರಬೇತಿಗಳಲ್ಲಿ ತರಬೇತಿ ಹೊಂದಿದ ಅಭ್ಯರ್ಥಿಗಳ ಬಗ್ಗೆ

೨೦೬೮. ಶ್ರೀ ಬಿ. ಬಸವಲಿಂಗಪ್ಪ (ಯಲಹಂಕ).—ಮಾನ್ಯ ಕಾರ್ಮಿಕ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ೧೯೮೭ ಜೂನೇ ಸಾಲಿನಲ್ಲಿ ಕಾರ್ಮಿಕ ಇಲಾಖೆಯಲ್ಲಿ ವಿವಿಧ ಯೋಜನೆಗಳಡಿಯಲ್ಲಿ ವೃತ್ತಿಪರ ತರಬೇತಿಗಳಲ್ಲಿ ತರಬೇತಿ ಹೊಂದಿದ ಅಭ್ಯರ್ಥಿಗಳ ಸಂಖ್ಯೆ ?

ಆ) ಈ ಯೋಜನೆಗಳಿಗಾಗಿ ನಿಗಧಿಪಡಿಸಿದ್ದ ಗುರಿ ?

ಇ) ಈ ತರಬೇತಿಯಿಂದಾಗಿ ಉದ್ಯೋಗ ಪಡೆದವರ ಸಂಖ್ಯೆ ?

ಶ್ರೀ ಎಸ್. ಕೆ. ಕಾಂತಾ (ಕಾರ್ಮಿಕ ಸಚಿವರು).—

ಅ) ಕಾರ್ಮಿಕ ಇಲಾಖೆಯಲ್ಲಿ ವೃತ್ತಿಪರ ತರಬೇತಿ ಕಾರ್ಯಕ್ರಮ ಇರುವುದಿಲ್ಲ. ಕಾರ್ಮಿಕ ಖಾತೆಯ ಅಡಿಯಲ್ಲಿ ಬರುವ ಉದ್ಯೋಗ ಮತ್ತು ತರಬೇತಿ ಇಲಾಖೆಯಲ್ಲಿ ತರಬೇತಿ ಹೊಂದಿದ ಅಭ್ಯರ್ಥಿಗಳ ಸಂಖ್ಯೆ ೨೪,೬೭೩

ಆ) ಮೂವತ್ತೊಂದು ಸಾವಿರದ ಇನ್ನೂರ ಎಪ್ಪತ್ತೊಂಭತ್ತು

ಇ) ೭೫೧೧ ಮಂದಿ ಉದ್ಯೋಗ ವಿನಿಮಯ ಕೇಂದ್ರದಿಂದ ಉದ್ಯೋಗ ದೊರಕಿಸಿಕೊಂಡಿದ್ದಾರೆ. ಆದರೆ ಇತರ ಮೂಲಗಳಿಂದ ಉದ್ಯೋಗ ದೊರಕಿಸಿಕೊಂಡವರ ಬಗ್ಗೆ ಮಾಹಿತಿ ಇರುವುದಿಲ್ಲ.

ಶ್ರೀ ಬಿ. ಬಸವಲಿಂಗಪ್ಪ.—ಮಾನ್ಯ ಅಧ್ಯಕ್ಷರೇ ಮಾನ್ಯ ಸಚಿವರು ಉತ್ತರ ಕೊಡುವಾಗ ಆಫೀಸಿನಿಂದ ಬಂದ ಉತ್ತರವನ್ನು ಓದಿರುತ್ತಾರೆಂದು ಕಾಣುತ್ತದೆ. ನನ್ನ ಮೊದಲನೆಯ ಪ್ರಶ್ನೆಗೆ ಕಾರ್ಮಿಕ ಇಲಾಖೆಯಲ್ಲಿ ವೃತ್ತಿಪರ ತರಬೇತಿ ಕಾರ್ಯಕ್ರಮ ಇರುವುದಿಲ್ಲ ಕಾರ್ಮಿಕ ಖಾತೆಯ ಅಡಿಯಲ್ಲಿ ಬರುವ ಉದ್ಯೋಗ ಮತ್ತು ತರಬೇತಿ ಇಲಾಖೆಯಲ್ಲಿ ತರಬೇತಿ ಹೊಂದಿದ ಅಭ್ಯರ್ಥಿಗಳ ಸಂಖ್ಯೆ ೨೪,೬೭೩ ಎಂದು ಹೇಳಿದ್ದಾರೆ ಇದು ಒಂದಕ್ಕೊಂದು ಸಂಬಂಧ ಇದೆ. ನಿಮ್ಮ ಇಲಾಖೆಯಿಂದ ಎಷ್ಟು ತರಬೇತಿ ಹೊಂದಿರತಕ್ಕಂಥ ವಿದ್ಯಾರ್ಥಿಗಳ ಸಂಖ್ಯೆ ಇಷ್ಟು ಎಂದು ಕೊಟ್ಟಿದ್ದೀರಲ್ಲ ಇದು ಯಾವ ಯಾವ ತರಬೇತಿ ಹೊಂದಿದ ವಿದ್ಯಾರ್ಥಿಗಳು ಎಂದು ಕೇಳುತ್ತೇನೆ.

ಶ್ರೀ ಎಸ್. ಕೆ. ಕಾಂತಾ.—ಮಾನ್ಯ ಅಧ್ಯಕ್ಷರೇ ಲೇಬರ್ ಖಾತೆಯಲ್ಲಿ ಟ್ರೈನಿಂಗ್ ಎಂಪ್ಲಾಯ್‌ಮೆಂಟ್ ಡಿಪಾರ್ಟ್‌ಮೆಂಟ್ ಇದೆ. ಲೇಬರ್ ಡಿಪಾರ್ಟ್‌ಮೆಂಟ್‌ದು ಕೆಳಿರುವುದರಿಂದ ಲೇಬರ್ ಡಿಪಾರ್ಟ್‌ಮೆಂಟಿಗೆ ಸಂಬಂಧಪಟ್ಟಿದ್ದು ಹೇಳಿದ್ದೇನೆ. ಕಾರ್ಮಿಕ ಖಾತೆಗೆ ಸಂಬಂಧಪಟ್ಟಿದ್ದು ಹೇಳಿದರೆ ಅದರಲ್ಲಿ ಕೇವಲ ಇಂಡಸ್ಟ್ರಿಯಲ್ ಡಿಸ್‌ಪ್ಯೂಟ್ಸ್ ಆಕ್ಟ್, ಅದರ ವಿಚಾರ ಆ ಇಲಾಖೆಯಲ್ಲಿ ಬರುತ್ತದೆ. ತಾವು ಕೇಳಿರುವುದು ಎಂಪ್ಲಾಯ್‌ಮೆಂಟ್ ಅಂಡ್ ಟ್ರೈನಿಂಗ್ ಲೇಬರ್ ಖಾತೆಯಲ್ಲಿ ಬರುತ್ತದೆ. ಅದಕ್ಕೋಸ್ಕರವಾಗಿ ಉತ್ತರವನ್ನು ಕೊಟ್ಟಿದ್ದೇನೆ.